

ಬಿಸಿಲು
# ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

## ಪ್ರಾಚೀನ ಮಹಿಳೆಯರಿಗೆ ಇದ್ದ ಕೆಚ್ಚೆದೆ!....

ಹಿಂದಿನ ವಾರದ ಅಂಕಣದಲ್ಲಿ ಪ್ರಸ್ತಾಪಿಸಿದ ದ್ರೌಪದಿಯ ವಸ್ತ್ರಾಪಹರಣ ಪ್ರಕರಣದಲ್ಲಿ ದುರ್ಯೋಧನ ಮತ್ತು ದುಶ್ಶಾಸನರ ದುರ್ವರ್ತನೆಯಿಂದ ಹೇಗೆ ಒಂದು ಅವಮಾನಕರ ಪ್ರಸಂಗ ಸೇಡಿನ ರೂಪವನ್ನು ಪಡೆದು ಮಹಾಭಾರತದ ಯುದ್ಧಕ್ಕೆ ನಾಂದಿಯಾಗುತ್ತದೆ ಎಂಬುದನ್ನು ನೋಡಿದಿರಿ. ವ್ಯಕ್ತಿಯ ಮಾತು ಮತ್ತು ವರ್ತನೆಗಳು ಸದ್ಭಾವನೆಯಿಂದ ಕೂಡಿದ್ದರೆ ಸತ್ಪರಿಣಾಮವನ್ನುಂಟುಮಾಡುತ್ತವೆ. ದುರ್ಭಾವನೆಯಿಂದ ಕೂಡಿದ್ದರೆ ದುಷ್ಪರಿಣಾಮವನ್ನುಂಟುಮಾಡುತ್ತವೆ. ಈ ಹಿನ್ನೆಲೆಯಲ್ಲಿ ಸರ್ವಜ್ಞನ ಮುಂದಿನ ಮಾತು ಮನನೀಯ:

**ಮಾತಿನಿಂ ನಗೆನುಡಿಯು, ಮಾತಿನಿಂ ಹಗೆಹೊಲೆಯು**
**ಮಾತಿನಿಂ ಸರ್ವಸಂಪದವು ಲೋಕಕ್ಕೆ ।**
**ಮಾತೇ ಮಾಣಿಕವು ಸರ್ವಜ್ಞ!**

'ಅಯ್ಯಾ ಎಂದರೆ ಸ್ವರ್ಗ, ಎಲವೋ ಎಂದರೆ ನರಕ' ಎಂಬ ಬಸವಣ್ಣನವರ ವಚನವೂ ಸಹ ಮಾತಿಗೆ ಎಂತಹ ವಿಭಿನ್ನ ಶಕ್ತಿ ಇದೆ ಎಂಬುದನ್ನು ತೋರಿಸುತ್ತದೆ. 'ಲೇಖನಿಯು ಖಡ್ಗಕ್ಕಿಂತ ಹರಿತ' (Pen is mightier than the sword) ಎಂದು ಹೇಗೆ ಹೇಳುತ್ತಾರೋ ಹಾಗೆಯೇ ಬೇರೊಂದು ಅರ್ಥದಲ್ಲಿ 'ಮಾತೂ ಸಹ ಖಡ್ಗಕ್ಕಿಂತ ಹರಿತ' ಎನ್ನಬಹುದು. ಮಾತಿನ ನಂಜು ಹಾವಿನ ವಿಷಕ್ಕಿಂತಲೂ ಹೆಚ್ಚು ಪ್ರಾಣಾಂತಿಕ. ಹಾವಿನ ವಿಷ ಹಾವು ಕಚ್ಚಿದ ಮನುಷ್ಯನನ್ನು ಕ್ಷಣಾರ್ಧದಲ್ಲಿ ಕೊಲ್ಲುತ್ತದೆ. ಆದರೆ ಮಾತಿನ ನಂಜು ಹಾಗಲ್ಲ. ಅದು ಒಮ್ಮೆಲೇ ಕೊಲ್ಲುವುದಿಲ್ಲ; ನಿಧಾನವಾಗಿ ಕೊಲ್ಲುತ್ತಾ ಹೋಗುತ್ತದೆ. ಅದೂ ಸಹ ಒಬ್ಬ ವ್ಯಕ್ತಿಯನ್ನಲ್ಲ, ಅನೇಕರನ್ನು ಕೊಲ್ಲುತ್ತದೆ. ಮಾತುಮಾತಿಗೆ ಇನ್ನೊಬ್ಬರ ಮನಸ್ಸನ್ನು ಘಾಸಿಗೊಳಸುವಂತಹ ಕುಹಕದ ಮಾತುಗಳನ್ನಾಡುವುದೇ ಕೆಲವರ ಕೆಟ್ಟ ಜಾಯಮಾನವಾಗಿರುತ್ತದೆ. ಇಂತಹ ವಿಕೃತಮನಸ್ಸುಳ್ಳವರು ಇನ್ನೊಬ್ಬರ ಮನಸ್ಸಿಗೆ ನೋವಾಗುವಂತಹ ಚುಚ್ಚು ಮಾತುಗಳನ್ನು ಆಡುವುದರಲ್ಲಿಯೇ ಕೆಟ್ಟ ತೃಪ್ತಿ (wicked pleasure) ಯನ್ನು ಪಡೆಯುತ್ತಾರೆ.

ಒಮ್ಮೆ ಹಳ್ಳಿಯ ಹಿರಿಯರೆಲ್ಲರೂ ಸೇರಿ ಪಂಚಾಯಿತಿ ಮಾಡಿ ಜಗಳವಾಡುತ್ತಿದ್ದ ಇಬ್ಬರು ದಾಯಾದಿಗಳನ್ನು ಮನವೊಲಿಸಿ ರಾಜಿ ಮಾಡಿಸಿದರು. ಸೌಹಾರ್ದಯುತವಾಗಿ ಬಗೆಹರಿದ ಸೂಚಕವಾಗಿ ಒಬ್ಬರ ಮನೆಯಲ್ಲಿ ಔತಣಕೂಟ ಏರ್ಪಡಿಸುವಂತೆ ಮಾಡಿದರು. ಎರಡೂ ಪಾರ್ಟಿಯವರು ಹಳೆಯ ದ್ವೇಷವನ್ನು ಮರೆತು ಒಂದಾಗಿ ಸಂತೋಷದಿಂದ ಊಟಕ್ಕೆ ಕುಳಿತರು. ಎಲ್ಲರಿಗೂ ಎಲೆಹಾಕಿ ಭಕ್ಷ್ಯಭೋಜ್ಯಗಳನ್ನು ಬಡಿಸಲಾಯಿತು. ಪಂಕ್ತಿಯಲ್ಲಿ ಕುಳಿತವರಿಗೆ ಊಟಕ್ಕೆ ಬಡಿಸಿದ ಮೇಲೆ ಸಾಂಪ್ರದಾಯಿಕವಾಗಿ ಕರ್ಪೂರ ಹಚ್ಚಿ ನಮಸ್ಕರಿಸಿ 'ಶರಣು, ಶರಣಾರ್ಥಿ' ಎನ್ನುವುದು ವಾಡಿಕೆ. ಆತಿಥೇಯ ಮನೆಯ ಮಹಿಳೆಯ ಮನಸ್ಸಿನಲ್ಲಿದ್ದ ನಂಜು ಪೂರಾ ಹೋಗಿರಲಿಲ್ಲ. ಕಾಟಾಚಾರಕ್ಕೆ ಕರ್ಪೂರ ಹಚ್ಚಿ ವ್ಯಂಗ್ಯವಾಗಿ "ಮಾವಂದಿರೇ, ಈಗಲಾದರೂ ನಿಮ್ಮ ಮೀಸೆ ಮಣ್ಣಾಯಿತೇ? ಶರಣು ಶರಣಾರ್ಥಿ" ಎಂದಳಂತೆ! ಆ ಮಹಿಳೆಯ ಕಟಕಿಯ ಮಾತು ಊಟಕ್ಕೆ ಕುಳಿತಿದ್ದ ಎದುರು ಪಾರ್ಟಿಯವರನ್ನು ಕೆರಳಿಸಿತು. ಅವಮಾನದಿಂದ ಸಿಟ್ಟು ನೆತ್ತಿಗೇರಿತು. ಹಚ್ಚಿಟ್ಟ ಕರ್ಪೂರದ ಜ್ಯೋತಿ ಜ್ಯೋತಿಯಾಗಿ ಉಳಿಯದೆ ಬೆಂಕಿಯಾಗಿ ಹತ್ತಿ ಉರಿದು ಎರಡೂ ಪಾರ್ಟಿಯವರು ಮತ್ತೆ ಕೈ ಕೈ ಮಿಲಾಯಿಸಿ ಹೊಡೆದಾಡುವ ಮಟ್ಟಕ್ಕೆ ಹೋಯಿತು!

ಮುಜುಗರ/ಅವಮಾನಕರ ಪ್ರಸಂಗಗಳಲ್ಲಿ ಅಪಮಾನಗೊಳಿಸಬಯಸಿದ ವ್ಯಕ್ತಿಗಳಿಗೆ ಮುಜುಗರಕ್ಕೆ ಒಳಗಾದ ವ್ಯಕ್ತಿಯು ಜಾಣ್ಮೆಯಿಂದ ತಿರುಗೇಟು ಕೊಟ್ಟ ಪ್ರಸಂಗಗಳೂ ಇವೆ. (ಕಾಶೀ ಹಿಂದೂ ವಿಶ್ವವಿದ್ಯಾನಿಲಯದಲ್ಲಿ ಓದುತ್ತಿದ್ದಾಗ ನಮ್ಮ ಸ್ವಾನುಭವಕ್ಕೆ ಬಂದ ಅಂತಹ ಕೆಲವು ಪ್ರಸಂಗಗಳನ್ನು ಕುರಿತು ಆಗಲೇ ಈ ಅಂಕಣದಲ್ಲಿ ಬಹಳ ಹಿಂದೆ ಬರೆಯಲಾಗಿದೆ.) ಉದಾಹರಣೆಗೆ ಅತ್ರಿಮಹರ್ಷಿಗಳ ಸಹಧರ್ಮಿಣಿ ಮಹಾಸಾಧ್ವಿ ಅನಸೂಯಾದೇವಿಯ ಪ್ರಕರಣವನ್ನು ತೆಗದುಕೊಳ್ಳಿ. ಅತ್ರಿ ಮಹರ್ಷಿಗಳು ಇಲ್ಲದ ವೇಳೆಯನ್ನು ನೋಡಿಕೊಂಡು ತ್ರಿಮೂರ್ತಿಗಳಾದ ಬ್ರಹ್ಮ-ವಿಷ್ಣು-ಮಹೇಶ್ವರರು ಋಷಿಗಳ ಮಾರುವೇಷದಲ್ಲಿ ಬರುತ್ತಾರೆ. ನೀನು ನಗ್ನಳಾಗಿ ನಮಗೆ ಊಟಕ್ಕೆ ಬಡಿಸಬೇಕೆಂಬ ತಮ್ಮ ಅಪೇಕ್ಷೆಯನ್ನು ಅವರು ವ್ಯಕ್ತಪಡಿಸಿದಾಗ ಅನಸೂಯೆ ಕ್ಷಣಕಾಲ ಸ್ತಂಭೀಭೂತಳಾದರೂ ಅವಳು ತೋರಿಸಿದ ಜಾಣ್ಮೆ ಎಂಥಹುದು! ಪತಿಯ ಪಾದೋದಕವನ್ನು ಪ್ರೋಕ್ಷಣೆಮಾಡಿ ತ್ರಿಮೂರ್ತಿಗಳನ್ನು ಹಸುಗೂಸುಗಳನ್ನಾಗಿ ಮಾಡಿ ತನ್ನ ಎದೆಹಾಲನ್ನು ಉಣಿಸುತ್ತಾಳೆ. ಈ ಪ್ರಸಂಗ ಎಂತಹ ಬಿಕ್ಕಟ್ಟಿನ ಸಂದರ್ಭದಲ್ಲೂ ಮನುಷ್ಯ ವಿಚಲಿತನಾಗದೆ ಹೇಗೆ ತಾನು ನಡೆಯಬೇಕಾದ ದಾರಿಯಲ್ಲಿ ದೃಢಹೆಜ್ಜೆಗಳನ್ನಿಟ್ಟು ನಡೆಯಲು ಬರುತ್ತದೆ ಎಂಬುದಕ್ಕೆ ಸಾಕ್ಷಿಯಾಗಿದೆ. ಕೆಲವರು ಇಂತಹ ಕಥಾನಕಗಳನ್ನು ಗೊಡ್ಡುಪುರಾಣಗಳೆಂದು ಹೀಗಳೆಯುವುದುಂಟು. ಆದರೆ ಪುರಾಣಪುಣ್ಯಕಥೆಗಳಲ್ಲಿ ಬರುವ ಇಂತಹ ಪಾತ್ರಗಳು - ದೇವತೆಗಳಿರಲಿ, ಋಷಿಮುನಿಗಳಿರಲಿ, ಮನುಷ್ಯರ ಎಲ್ಲ ಗುಣಾವಗುಣಗಳ ಪಡಿಯಚ್ಚು ಎಂಬುದನ್ನು ಮರೆಯಬಾರದು. ಇಂತಹ ಕಥಾನಕಗಳನ್ನು ದಾರ್ಶನಿಕ ದೃಷ್ಟಿಯಿಂದ ನೋಡದೆ ಮನಃಶಾಸ್ತ್ರದ ದೃಷ್ಟಿಯಿಂದ ನೋಡುವುದು ಒಳಿತು. ಆಗ ಅಂದಿನ ಮನಸ್ಸು ಇಂದಿನ ಮನಸ್ಸಿಗೆ ಹೇಗೆ ಸಂವಾದಿ ಎಂಬ ನಿಜಾಂಶ ತಿಳಿದುಬರುತ್ತದೆ.

ನಿತ್ಯಜೀವನದಲ್ಲಿ 'ಅಪರಾಧಿ ಪ್ರಜ್ಞೆ, ಲಜ್ಜೆ, ಮುಜುಗರ ಮತ್ತು ಅವಮಾನ' ಈ ಮುಂತಾದ ಶಬ್ದಗಳನ್ನು ಪರಸ್ಪರ ಏನೂ ವ್ಯತ್ಯಾಸವಿಲ್ಲದಂತೆ ಅನೇಕರು ಬಳಸುತ್ತಾರೆ. ಮನಃಶಾಸ್ತ್ರಜ್ಞರ ಪ್ರಕಾರ ಇವು ಒಂದೇ ಅಲ್ಲ; ಇವು ಮನಸ್ಸಿನ ವಿಭಿನ್ನ ಸ್ಥಿತ್ಯಂತರಗಳು. ಯಾವುದೇ ವ್ಯಕ್ತಿಯ ನಡವಳಿಕೆಗಳು ಅವನ ಜೀವನಾದರ್ಶಗಳಿಗೆ ಅನುಗುಣವಾಗಿ ಇಲ್ಲದೇ ಹೋದಾಗ 'ಅಪರಾಧಿ ಪ್ರಜ್ಞೆ' ಉಂಟಾಗುತ್ತದೆ. ತಾನು ಇಂತಹ ತಪ್ಪನ್ನು ಮಾಡಬಾರದಾಗಿತ್ತು ಎಂದು ಅವನಿಗೆ ಅನ್ನಿಸಿದರೂ ಮನಸ್ಸಿನ ದೌರ್ಬಲ್ಯದ ಕಾರಣದಿಂದಾಗಿ ಮತ್ತೆ ಮತ್ತೆ ಮಾಡಿದ ತಪ್ಪನ್ನೇ ಮಾಡುತ್ತಾನೆ. ಆ ರೀತಿ ತಪ್ಪು ಮಾಡಿದಾಗಲೆಲ್ಲಾ ಅವನಲ್ಲುಂಟಾಗುವ 'ಅಪರಾಧಿ ಪ್ರಜ್ಞೆ' ಅವನನ್ನು ನಿರಂತರವಾಗಿ ಕಾಡಿಸುತ್ತಲೇ ಇರುತ್ತದೆ. ಯಾವುದೋ ಒಂದು ಹಂತದಲ್ಲಿ ಆತನ ಅಂತಃಸಾಕ್ಷಿ ತೀವ್ರತರವಾಗಿ ಜಾಗ್ರತಗೊಂಡು ಪಶ್ಚಾತ್ತಾಪ ಉಂಟಾದಾಗ ಸಂಪೂರ್ಣವಾಗಿ ಹೊಸಮನುಷ್ಯನಾಗುವ ಸಾಧ್ಯತೆಗಳು ಇವೆ. ಅಂತಹ ಸಂದರ್ಭ ಬದುಕಿನಲ್ಲಿ ಒಂದು ಹೊಸ ತಿರುವನ್ನು ತಂದುಕೊಡುತ್ತದೆ.

ಅಪರಾಧಿ ಪ್ರಜ್ಞೆಯು ಹೀಗೆ ವ್ಯಕ್ತಿಯಲ್ಲಿ ಸಕಾರಾತ್ಮಕವಾದ ಬದಲಾವಣೆಯನ್ನು ತಂದರೆ ಲಜ್ಜಾ ಭಾವನೆಗಳು ಹಾಗಲ್ಲ. ಅವು 'ನಾನು ಒಳ್ಳೆಯವನಲ್ಲ, ಕೆಟ್ಟವನು, ನನ್ನಷ್ಟು ಅಯೋಗ್ಯ ವ್ಯಕ್ತಿ ಈ ಜಗತ್ತಿನಲ್ಲೇ ಇಲ್ಲ. ನನ್ನನ್ನು ಯಾರೂ ತಿದ್ದಲು ಸಾಧ್ಯವಿಲ್ಲ' ಎಂಬ ನಕಾರಾತ್ಮಕ ಭಾವನೆಗಳನ್ನು (negative feelings) ಬೆಳೆಸುತ್ತಾ ತನ್ನನ್ನು ತಾನೇ ಹಳಿಯುವಂತೆ ಮಾಡುತ್ತವೆ. ಹೀಗೆ ವ್ಯಕ್ತಿಯು ತನ್ನನ್ನು ತಾನೇ ನಿಂದಿಸುತ್ತಾ ತನ್ನ ಬಗ್ಗೆ ತಾನೇ ಬೇಸರಗೊಂಡು ಸ್ವಯಂನಿಕೃಷ್ಟಭಾವನೆಯನ್ನು ತಾಳಿ ತನಗೆ ತಾನೇ ಪರಕೀಯನಾಗುತ್ತಾನೆ. ಇದರಿಂದ ಒಂದು ರೀತಿಯ ಜಿಗುಪ್ಸಾ ಭಾವನೆಯನ್ನು ಹೊಂದಿ ನಕಾರಾತ್ಮಕವಾಗಿ ಯೋಚನೆ ಮಾಡುತ್ತಾ ಕೊನೆಗೊಮ್ಮೆ ತನ್ನ ಜೀವನವನ್ನೇ ಕೊನೆಗಾಣಿಸಿಕೊಳ್ಳುವ ಅಪಾಯದ ಸ್ಥಿತಿಯನ್ನು ತಲುಪುತ್ತಾನೆ.

ಮುಜುಗರದ ಭಾವನೆಯು ಉಳಿದೆಲ್ಲ ಭಾವನೆಗಳಿಗೆ ಹೋಲಿಸಿದರೆ ಏನೂ ಅಲ್ಲ. ಬಹುಬೇಗ ಮರೆತುಹೋಗುವಂತಹದು. ಅಂತಹ ತೀವ್ರತರವಾದ ಪರಿಣಾಮವನ್ನೇನೂ ವ್ಯಕ್ತಿಯ ಮೇಲೆ ಮಾಡುವುದಿಲ್ಲ. ಆಕಸ್ಮಿಕವಾಗಿ ಘಟಿಸುವ ಮುಜುಗರದ ಪ್ರಸಂಗಗಳನ್ನು ವ್ಯಕ್ತಿ ಒಳಗಿಂದೊಳಗೇ ಸಹಿಸಿಕೊಳ್ಳಬಲ್ಲ. ಆದರೆ ಉದ್ದೇಶಪೂರ್ವಕವಾದ ಅವಮಾನಕರ ಪ್ರಸಂಗಗಳನ್ನು ಮಾತ್ರ ಎಂದೂ ಸಹಿಸಿಕೊಳ್ಳಲು ಅವನಿಂದ ಸಾಧ್ಯವಾಗುವುದಿಲ್ಲ. ತನ್ನ ಬಗ್ಗೆ ತನಗಾಗದವರು ಆಡುವ ನಿಂದನೆಯ ಮಾತುಗಳನ್ನು ಕೇಳಲು ಅವನಿಗೆ ಸ್ವಲ್ಪವೂ ಇಷ್ಟವಾಗುವುದಿಲ್ಲ. ಮೇಲಿಂದ ಮೇಲೆ ಅಂತಹ ಮಾತುಗಳು ಕೇಳಿಬಂದಾಗ ಅವನ ತಾಳ್ಮೆಯ ಕಟ್ಟೆಯೊಡೆದು ತಿರುಗಿ ಬೀಳುತ್ತಾನೆ. 'ಎಲ್ಲಿಯವರೆಗೇಂತ ನಾನು ಹೀಗೆ ಸುಮ್ಮನಿರಲಿ' ಎಂಬ ಮಾತುಗಳಲ್ಲಿ ಅದು ಮೂರ್ತಸ್ವರೂಪವನ್ನು ಪಡೆಯುತ್ತದೆ. ಇಂದಿನ ಸಮಾಜದಲ್ಲಿ ನಾವು ಕಂಡಂತೆ ಇದನ್ನು ಬಹುಮಟ್ಟಿಗೆ ಗಂಡನ ಮನೆಯಲ್ಲಿ ದೈಹಿಕ ಮತ್ತು ಮಾನಸಿಕ ಕಿರುಕುಳವನ್ನು ಅನುಭವಿಸುವ ಯುವಮಹಿಳೆಯರಲ್ಲಿ ಕಾಣಬಹುದಾಗಿದೆ. ಈ ರೀತಿಯ ಪ್ರತಿಗಾಮಿ ಪ್ರತಿಕ್ರಿಯೆ ಹೊಸದೇನಲ್ಲ. ಇಂತಹ ಪ್ರಸಂಗವನ್ನು ಮೂಲ ಮಹಾಭಾರತದ ಶಾಕುಂತಲೋಪಾಖ್ಯಾನದಲ್ಲಿ ನೋಡಬಹುದು. ಇದನ್ನು ಆಧರಿಸಿ ಅಭಿಜ್ಞಾನಶಾಕುಂತಲ ನಾಟಕವನ್ನು ರಚಿಸಿದ ಮಹಾಕವಿ ಕಾಳಿದಾಸ 'ಕಾವ್ಯೇಷು ನಾಟಕಂ ರಮ್ಯಂ ತತ್ರಾಪಿ ಚ ಶಕುಂತಲಾ' (ಕಾವ್ಯಗಳಲ್ಲೆಲ್ಲಾ ನಾಟಕವು ಶ್ರೇಷ್ಠ, ಆ ನಾಟಕಗಳಲ್ಲಿ ಶಾಕುಂತಲ ನಾಟಕವು ಶ್ರೇಷ್ಠ) ಎಂಬ ಖ್ಯಾತಿಯನ್ನು ಪಡೆದ. ಆದರೆ ದುಷ್ಯಂತನನ್ನು ಧೀರೋದಾತ್ತ ನಾಯಕನನ್ನಾಗಿ ಮಾಡಲು ಹೋಗಿ ಅನೇಕ ಅವಾಸ್ತವ ಕಲ್ಪನೆಗಳನ್ನು ಕಾಳಿದಾಸ ಮಾಡಿಕೊಂಡಿದ್ದಾನೆ. ಅವನದೇನೂ ತಪ್ಪಿಲ್ಲ, ಪದ್ಮಪುರಾಣವನ್ನು ಆಧರಿಸಿ ರಚಿಸಿದ್ದಾನೆ ಎಂದು ಕಾಳಿದಾಸನನ್ನು ಸಮರ್ಥಿಸುವವರೂ ಇದ್ದಾರೆ. ಮೂಲಮಹಾಭಾರತದಲ್ಲಿ ಕಾಣಿಸುವ ದುಷ್ಯಂತ-ಶಕುಂತಲೆಯರೇ ಬೇರೆ, ಪದ್ಮಪುರಾಣದ/ಕಾಳಿದಾಸನ ನಾಟಕದ ದುಷ್ಯಂತ-ಶಕುಂತಲೆಯರೇ ಬೇರೆ.

ಶಾಕುಂತಲ ನಾಟಕದಲ್ಲಿ ಕಣ್ವಮಹರ್ಷಿಗಳ ಸಾಕುಮಗಳಾದ ಶಕುಂತಲೆಯು ತುಂಬುಗರ್ಭಿಣಿಯಾಗಿ ಗಂಡನಾದ ದುಷ್ಯಂತನ ಅರಮನೆಗೆ ಹೋದಾಗ ದುಷ್ಯಂತ ಆಕೆಯನ್ನು ಗುರುತಿಸುವುದೇ ಇಲ್ಲ. ಅದಕ್ಕೆ ಕಾಳಿದಾಸನ ಕಲ್ಪನೆಯ ಪ್ರಕಾರ ದೂರ್ವಾಸ ಮುನಿಯು ಕೊಟ್ಟ ಶಾಪ ಕಾರಣ. ಆಶ್ರಮಕ್ಕೆ ಬಂದಾಗ ಗಂಡನ ಯೋಚನೆಯಲ್ಲಿ ಅನ್ಯಮನಸ್ಕಳಾಗಿದ್ದ ಶಕುಂತಲೆ ತನಗೆ ಅತಿಥಿಸತ್ಕಾರವನ್ನು ಸರಿಯಾಗಿ ಮಾಡಲಿಲ್ಲವೆಂಬುದು ದೂರ್ವಾಸಮುನಿಯ ಸಿಟ್ಟಿಗೆ ಕಾರಣ. ಗಂಡನಿಗೆ ತನ್ನ ಮದುವೆಯ ನೆನಪು ಮಾಡಿಕೊಡಲು ಶಕುಂತಲೆಯು ಮುಂದಾದಾಗ ಅವನು ಕೊಟ್ಟಿದ್ದ ಉಂಗುರ ಆಕೆಯ ಕೈಯಲ್ಲಿ ಇರುವುದಿಲ್ಲ. ದುಷ್ಯಂತ ಆಶ್ರಮಕ್ಕೆ ಬಂದಾಗ ಗಾಂಧರ್ವ ವಿವಾಹವಾದ ಸಂದರ್ಭದಲ್ಲಿ ಆಕೆಗೆ ಕೊಟ್ಟಿದ್ದ ಉಂಗುರ ನದಿಯಲ್ಲಿ ಸ್ನಾನಮಾಡುವಾಗ ಜಾರಿಬಿದ್ದು ಕಳೆದುಹೋಗಿರುತ್ತದೆ. ಪಾಪ, ದುಷ್ಯಂತನಾದರೂ ಏನು ಮಾಡಿಯಾನು, ಎಲ್ಲಾ ವಿಧಿವಿಲಾಸ ಎನ್ನುವಂತೆ ಕಾಳಿದಾಸ ದುಷ್ಯಂತನನ್ನು ನಿಷ್ಕಳಂಕ ವ್ಯಕ್ತಿಯನ್ನಾಗಿ ಚಿತ್ರಿಸಿದ್ದಾನೆ. ಆದರೆ ಮೂಲ ಮಹಾಭಾರತವು ದುಷ್ಯಂತನನ್ನು ಹೀಗೆ ನಿರಪರಾಧಿಯೆಂದು ಕಟ್ಟುಕತೆ ಕಟ್ಟಿಲ್ಲ. ಶಕುಂತಲೆ ಅವನ ಅರಮನೆಗೆ ಬಂದಾಗ ರಾಜಸಭಾಸದರೆಲ್ಲರೆದುರಿಗೆ ಆಕೆಯನ್ನು ತನ್ನ ಹೆಂಡತಿಯೆಂದು ಗುರುತಿಸಿಯೂ ಜನರೆದುರಿಗೆ ತನ್ನ ಮರ್ಯಾದೆ ಹೋಗುತ್ತದೆಯೆಂದು ನಿರಾಕರಿಸುತ್ತಾನೆ. ಆತನು ತನ್ನೊಂದಿಗೆ ಮದುವೆಯಾಗಿ ಸರಸಸಲ್ಲಾಪವಾಡಿದ ದಿನಗಳನ್ನು ಮತ್ತು ತನ್ನ ಮಗನನ್ನೇ ಯುವರಾಜನನ್ನಾಗಿ ಮಾಡುವುದಾಗಿ ಮಾತುಕೊಟ್ಟಿದ್ದನ್ನು ನೆನಪುಮಾಡಿಕೊಡಲು ಶಕುಂತಲೆಯು ಬಹಳವಾಗಿ ಪ್ರಯತ್ನಿಸುತ್ತಾಳೆ. ಆದರೆ ದುಷ್ಯಂತ ಸುತರಾಂ ಒಪ್ಪುವುದಿಲ್ಲ. ತನ್ನ ರಾಜ್ಯವನ್ನು ಲಪಟಾಯಿಸಲು ಸೋಗುಹಾಕಿಕೊಂಡು ಕಾಡಿನಿಂದ ಬಂದ ದುಷ್ಟತಾಪಸಿ ಎಂದು ಅವಳ ತೇಜೋವಧೆ ಮಾಡುತ್ತಾನೆ. ತನ್ನ ಗಂಡ ತನ್ನನ್ನು ಗುರುತಿಸಿಯೂ ಗೊತ್ತಿಲ್ಲವೆಂಬಂತೆ ನಾಟಕವಾಡುತ್ತಿದ್ದಾನೆಂದು ಶಕುಂತಲೆಗೆ ಗೊತ್ತಾಗುತ್ತದೆ. ಕೆರಳಿದ ಸಿಂಹಿಣಿಯಾಗುತ್ತಾಳೆ. ನಿನ್ನ ಆತ್ಮ ಮುಟ್ಟಿಕೊಂಡು ಹೇಳು ಎಂದು ಸವಾಲು ಹಾಕುತ್ತಾಳೆ.

**ಯದಿ ಮೇ ಯಾಚಮಾನಾಯಾ ವಚನಂ ನ ಕರಿಷ್ಯಸಿ ಃ**
**ದುಃಷ್ಯಂತ ಶತಧಾ ಮೂರ್ಧಾ ತತಸ್ತೇಽದ್ಯ ಪತಿಷ್ಯತಿ ॥**

ಇಷ್ಟೆಲ್ಲಾ ಒಳ್ಳೆಯ ಮಾತಿನಲ್ಲಿ ನಡೆದ ಸಂಗತಿಯನ್ನು ಹೇಳಿದ ಮೇಲೂ ನೀನು ನನ್ನನ್ನು ಹೆಂಡತಿಯೆಂದು ಒಪ್ಪಿಕೊಳ್ಳಲು ಸಿದ್ಧನಾಗದಿದ್ದರೆ 'ನಿನ್ನ ತಲೆ ನುಚ್ಚು ನೂರಾಗಿ ಒಡೆದು ಹೋಗಲಿ' ಎಂದು ಶಪಿಸುತ್ತಾಳೆ.

**ಅಂಡಾನಿ ಬಿಭ್ರತಿ ಸ್ವಾನಿ ನ ಭಿನ್ದಂತಿ ಪಿಪೀಲಿಕಾಃ ।**

**ನ ಭರೇಥಾಃ ಕಥಂ ನು ತ್ವಂ ಧರ್ಮಜ್ಞಃ ಸನ್ ಸ್ವಮಾತ್ಮಜಮ್ ॥**

ಸಾಮಾನ್ಯ ಇರುವೆಗಳೂ ಸಹ ತಾವು ಇಟ್ಟ ಮೊಟ್ಟೆಗಳನ್ನು ಒಡೆದು ಹಾಕುವುದಿಲ್ಲ. ಅಂಥದ್ದರಲ್ಲಿ ದೊಡ್ಡಮನುಷ್ಯನಾದ (ಧರ್ಮಜ್ಞನಾದ) ನೀನು ನಿನ್ನ ವಂಶದ ಕುಡಿಯನ್ನು ಪೋಷಣೆಮಾಡಲು ಆಗುವುದಿಲ್ಲವೆಂದರೆ ನಿನಗೆ ನಾಚಿಕೆಯಾಗುವುದಿಲ್ಲವೇ? ಎಂದು ಹಂಗಿಸುತ್ತಾಳೆ. ಮೂಲ ಮಹಾಭಾರತದ ಶಕುಂತಲೆಯು ಆಡಿದ ಈ ಮಾತುಗಳ ಹಿಂದೆ ಎಂತಹ ಕೆಚ್ಚೆದೆ ಇದೆ!

ಲೌಕಿಕ ಜೀವನದ ಎಲ್ಲ ಮುಜುಗರ ಭಾವನೆಗಳನ್ನು ಮೆಟ್ಟಿನಿಂತ ವೀರವಿರಾಗಿಣಿ ಅಕ್ಕಮಹಾದೇವಿಯನ್ನೂ ಸಹ ಜನರು ಗೋಳುಹೊಯ್ದುಕೊಳ್ಳದೆ ಬಿಟ್ಟಿಲ್ಲ. ಅರಮನೆಯಲ್ಲಿದ್ದಾಗ ಕೌಶಿಕಮಹಾರಾಜ ಕಾಮಾಂಧನಾಗಿ ಆಕೆಯ ಮೇಲೆ ದುರಾಕ್ರಮಣ ನಡೆಸಲು ಬಂದಾಗ 'ಎನಗೆ ಎನ್ನಯ ಚಿಂತೆ, ನಿನಗೆ ಕಾಮದ ಚಿಂತೆ, ಸೆರಗ ಬಿಡು ಮರುಳೆ! ಎನಗೆ ಎನ್ನ ಚೆನ್ನಮಲ್ಲಿಕಾರ್ಜುನ ಒಲಿವನೋ ಒಲಿಯನೋ ಎಂಬ ಚಿಂತೆ!' ಎಂದು ಕೊಟ್ಟ ದಿಟ್ಟ ಉತ್ತರ ಆಧ್ಯಾತ್ಮಿಕ ಇತಿಹಾಸದಲ್ಲಿಯೇ ಅನ್ಯಾದೃಶವಾದುದು. ಅರಮನೆಯಿಂದ ಹೊರಟು ಬೀದಿಗಿಳಿದಾಗ ಜನಸಾಮಾನ್ಯರು ಆಕೆಗೆ ಕೊಟ್ಟ ಕಾಟ, ಉಪಟಳ ಅಷ್ಟಿಷ್ಟಲ್ಲ. ಅಂತಹ ಪ್ರಸಂಗಗಳನ್ನು ಧೈರ್ಯವಾಗಿ ಎದುರಿಸಿ ಅವಳಾಡಿದ ಈ ಕೆಳಗಿನ ಮಾತುಗಳಿಗೆ ಯಾವ ವ್ಯಾಖ್ಯಾನವೂ ಬೇಕಿಲ್ಲ.

**ಬಟ್ಟಹ ಮೊಲೆಯ, ಭರದ ಜವ್ವನದ
ಚೆಲುವ ಕಂಡು ಬಂದಿರಣ್ಣಾ!
ಅಣ್ಣಾ, ನಾನು ಹೆಂಗೂಸಲ್ಲ!
ಅಣ್ಣಾ, ನಾನು ಸೂಳೆಯಲ್ಲ!
ಅಣ್ಣಾ, ಮತ್ತೆ ನನ್ನ ಕಂಡು ಕಂಡು
ಆರೆಂದು ಬಂದಿರಣ್ಣಾ?
ಚೆನ್ನಮಲ್ಲಿಕಾರ್ಜುನನಲ್ಲದ ಮಿಕ್ಕಿನ ಪುರುಷನು
ನನಗಾಗದ ಮೋರೆ ನೋಡಣ್ಣಾ!**

**ಮುಡಿಬಿಟ್ಟು ಮೊಗ ಬಾಡಿ ತನು ಕರಗಿದವಳ
ಎನ್ನನೇಕೆ ನುಡಿಸುವಿರಿ ಎಲೆ ಅಣ್ಣಗಳಿರಾ?
ಎನ್ನನೇಕೆ ಕಾಡುವಿರಿ, ಎಲೆ ತಂದೆಗಳಿರಾ?
ಬಲುಹಳಿದು, ಭವಗೆಟ್ಟು ಛಲವಳಿದು ಭಕ್ತೆಯಾಗಿ
ಚೆನ್ನಮಲ್ಲಿಕಾರ್ಜುನನ ಕೂಡಿ ಕುಲವಳಿದವಳ!**

**ಸ್ಟ್ರಾಸ್‌ಬುರ್ಗ್ (ಫ್ರಾನ್ಸ್)
29.7.2009**

**ಶ್ರೀ ತರಳಬಾಳು ಜಗದ್ಗುರು
ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ**

❑